ಬೀದಿ ನಾಯಿ ಸಂಖ್ಯೆ ನಿರ್ವಹಣಾ ಕಾರ್ಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 23 (149)

ಶ್ರೀ ಕೃಷ್ಣ ಬೈರೇಗೌಡ ಸಿ.ಬಿ.:

ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ನಿರ್ವಹಣಾ ಕಾರ್ಯವನ್ನು ಪ್ರಾರಂಭಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ನಿರ್ವಹಣಾ ಕಾರ್ಯವನ್ನು ಎಂದಿನಿಂದ ಪ್ರಾರಂಭಿಸಲಾಗಿದೆ; ಈ ಕಾರ್ಯ ಪ್ರಾರಂಭವಾದಾಗಿನಿಂದ ಖರ್ಚು ಮಾಡಿರುವ ಹಣ (ವರ್ಷವಾರು ಮಾಹಿತಿಯನ್ನು ಒದಗಿಸುವುದು)

ಇ) ಎಂದಿನಿಂದ ಬೀದಿ ನಾಯಿಗಳ ಗಣತಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಈ ಪ್ರತಿ ವರ್ಷಗಳಲ್ಲಿ ಬೀದಿ ನಾಯಿಗಳ ಸಂಖ್ಯೆ ಏನು (ವರ್ಷವಾರು ವಿವರಗಳನ್ನು ಒದಗಿಸುವುದು)

ಈ) ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸಲು ಯಾವ ಯಾವ ಕ್ರಮಗಳನ್ನು ಕೈಕೊಳ್ಳಲಾಗಿದೆ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಯವರು):

ಅ) ಹೌದು

ಆ) ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಣಗೊಳಿಸಲು ಸಂತಾನಹರಣ ಶಸ್ತ್ರಚಿಕಿತ್ಸೆ (ಶ್ವಾನಗಳು) ಯನ್ನು ನವೆಂಬರ್ – 2000 ರಿಂದ ಪ್ರಾರಂಭಿಸಲಾಗಿರುತ್ತದೆ. ಸದರಿ ಕಾರ್ಯಕ್ರಮಕ್ಕೆ ವಾರ್ಷಿಕವಾರು ವೆಚ್ಚ ಮಾಡಿದ ಮೊತ್ತದ ವಿವರವನ್ನು ಅನುಬಂಧ–ಎ ರಲ್ಲಿ ನೀಡಲಾಗಿದೆ.

ಇ)

1. ಬೀದಿ ನಾಯಿಗಳ ಗಣತಿಯನ್ನು ಮೊದಲನೆಯದಾಗಿ ಜೂನ್–ಜುಲೈ 2007ರಲ್ಲಿ ನಡೆಸಲಾಯಿತು.

2. ಈ ಗಣತಿಯ ಪ್ರಕಾರ ಪಾಲಿಕೆಯ ವ್ಯಾಪ್ತಿಯಲ್ಲಿ 1,83,758 ಬೀದಿ ನಾಯಿಗಳು ಇರುತ್ತವೆ.
3. ಬೀದಿ ನಾಯಿ ಸಂತಾನಹರಣ ಶಸ್ತ್ರಚಿಕಿತ್ಸೆಯ ಪ್ರಭಾವವನ್ನು ಬೀದಿ ನಾಯಿಗಳ ಸಂಖ್ಯೆಯ ಮೇಲೆ ಯಾವ ರೀತಿ ಬೀರಿದೆ ಎಂಬುದನ್ನು ಪರಿಶೀಲಿಸಲು ಸದ್ಯದಲ್ಲೇ ಬೀದಿ ನಾಯಿಗಳ ಗಣತಿಯನ್ನು ಮಾಡುವ ಪ್ರಸ್ತಾವನೆ ಇದೆ.

ಈ)

1. ಬೀದಿ ನಾಯಿ ಸಂತಾನಹರಣ ಶಸ್ತ್ರಚಿಕತ್ಸೆ ಕಾರ್ಯಕ್ರಮವನ್ನು ಕ್ರಮಬದ್ಧವಾಗಿ ಪಾಲಿಕೆಯ 198 ವಾರ್ಡುಗಳಲ್ಲಿ ನಿರ್ವಹಿಸಲಾಗುತ್ತಿದೆ.
2. ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ವರ್ಷವಿಡೀ ಮಾಡಲಾಗುತ್ತಿದೆ.
3. ಸಂತಾನಹರಣಾ ಶಸ್ತ್ರಚಿಕಿತ್ಸಾ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪಾಲಿಕೆಯ 198 ವಾರ್ಡುಗಳನ್ನು 20 ಪ್ಯಾಕೇಜುಗಳಾಗಿ ವಿಂಗಡಿಸಲಾಗಿದೆ.
4. ಸದ್ಯದಲ್ಲೇ 7 ಜಾನುವಾರು ಕಲ್ಯಾಣ ಸಂಸ್ಥೆಗಳು ಸಂತಾನಹರಣ ಶಸ್ತ್ರಚಿಕಿತ್ಸೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ.
5. ಸರಾಸರಿಯಾಗಿ ಪ್ರತಿ ತಿಂಗಳು 6500–7000 ಶಸ್ತ್ರಚಿಕಿತ್ಸೆಗಳನ್ನು ಬೆಂಗಳೂರಿನಾದ್ಯಂತ ಮಾಡಲಾಗುತ್ತಿದೆ.
6. ಬೀದಿ ನಾಯಿಗಳಲ್ಲಿ ಹುಚ್ಚು ನಾಯಿ ರೋಗದ ಪ್ರಕರಣಗಳನ್ನು ತಪ್ಪಿಸಲು ಪ್ರತಿ ವರ್ಷ ಹುಚ್ಚು ನಾಯಿ ನಿರೋಧಕ ಚುಚ್ಚುಮದ್ದನ್ನು ನೀಡಲಾಗುತ್ತಿದೆ.
7. ಬೀದಿ ನಾಯಿಯಲ್ಲಿ ಹುಚ್ಚುನಾಯಿ ರೋಗ ಕಾಣಿಸಿಕೊಂಡಲ್ಲಿ, ಸದರಿ ಪ್ರದೇಶದಲ್ಲಿ ರಿಂಗ್ ಹುಚ್ಚನಾಯಿ ರೋಗ ನಿರೋಧಕ ಚುಚ್ಚುಮದ್ದನ್ನು ಹಾಕಲಾಗುತ್ತಿದೆ.
8. ಬೀದಿ ನಾಯಿ ಕಡಿತದ ಪ್ರಕರಣಗಳು ಬಹಳಷ್ಟು ಸಂಖ್ಯೆಯ ಒಂದಲ್ಲ ಒಂದು ರೀತಿಯ ಪ್ರಚೋದನೆಯ ಕಾರಣದಿಂದ

ಆಗುತ್ತಿರುವ ಹಿನ್ನಲೆಯಲ್ಲಿ ಇವುಗಳನ್ನು ತಪ್ಪಿಸಲು ಏನು ಮಾಡಬೇಕು. ಹಾಗೂ ಒಂದು ಪಕ್ಷದಲ್ಲಿ ನಾಯಿ ಕಡಿತಕ್ಕೆ ಒಳಗಾಗಿದ್ದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಪಾಲಿಕೆಯ ಶಾಲೆಗಳಲ್ಲಿ ದಿ. 15–6–2012 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

9. ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಂತಹಂತವಾಗಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಗೆ ವಿಸ್ತರಿಸಲಾಗುವುದು.

ಚುಕ್ಕೆ ಗುರುತ್ತಿನ ಪ್ರಶ್ನೆ ಸಂಖ್ಯೆ 149ಕ್ಕೆ

ಅನುಬಂಧ – ಎ

Annexure – A

ಎಬಿಸಿ–ಎಆರ್‌ವಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಾರ್ಷಿಕ ವೆಚ್ಚದ ವಿವರ

ಕ್ರ.ಸಂ.	ಅವಧಿ	ಬೀದಿ ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಹುಚ್ಚುನಾಯಿ ರೋಗ ನಿರೋಧಕ ಚುಚ್ಚುಮದ್ದು ಹಾಕುವಿಕೆ ಹಾಗೂ ದಯಾಮರಣಕ್ಕೆ ಒಳಪಡಿಸಲು ಖರ್ಚು ಮಾಡಿದ ಮೊತ್ತದ ವಿವರ
1	ನವೆಂಬರ್ – 2000 ರಿಂದ ಮಾರ್ಚ್ 2001	– ಇಲ್ಲ –
2	ಏಪ್ರಿಲ್ 2001 ರಿಂದ ಮಾರ್ಚ್ 2002	ರೂ. 51,33,400/–
3	ಏಪ್ರಿಲ್ 2002 ರಿಂದ ಮಾರ್ಚ್ 2003	ರೂ. 79,14,525/–
4	ಏಪ್ರಿಲ್ 2003 ರಿಂದ ಮಾರ್ಚ್ 2004	ರೂ. 1,23,14,053/–
5	ಏಪ್ರಿಲ್ 2004 ರಿಂದ ಮಾರ್ಚ್ 2005	ರೂ. 1,49,14,455/–
6	ಏಪ್ರಿಲ್ 2005 ರಿಂದ ಮಾರ್ಚ್ 2006	ರೂ. 1,35,54,570/–
7	ಏಪ್ರಿಲ್ 2006 ರಿಂದ ಮಾರ್ಚ್ 2007	ರೂ. 1,20,73,989/–
8	ಏಪ್ರಿಲ್ 2007 ರಿಂದ ಮಾರ್ಚ್ 2008	ರೂ. 2,19,06,872/–
9	ಏಪ್ರಿಲ್ 2008 ರಿಂದ ಮಾರ್ಚ್ 2009	ರೂ. 1,76,87,872/–
10	ಏಪ್ರಿಲ್ 2009 ರಿಂದ ಮಾರ್ಚ್ 2010	ರೂ. 1,39,89,875/–
11	ಏಪ್ರಿಲ್ 2010 ರಿಂದ ಮಾರ್ಚ್ 2011	ರೂ. 3,42,19,018/–
12	ಏಪ್ರಿಲ್ 2011 ರಿಂದ ಮಾರ್ಚ್ 2012	ರೂ. 5,09,38,000/–

ಶ್ರೀ ಸಿ.ಬಿ. ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, 'ಉತ್ತರ ಬಂದಿದೆ, ಆದರೆ, ಎಷ್ಟು ಬೇಜವಾಬ್ದಾರಿತನ ಇದೆ ಎಂದರೆ. ಉತ್ತರದಲ್ಲಿ ನಾವು ಏನು ಉತ್ತರ ಕೊಡುತ್ತಿದ್ದೇವೆಂದು ಮತ್ತು ಒಂದೊಕ್ಕೊಂದು ತಾಳೆ ಆಗುತ್ತಿದೆಯೇ ಎಂಬ ಆಲೋಚನೆಯನ್ನು ಅಧಿಕಾರಿಗಳು ಮಾಡಿರುವ ರೀತಿಯಲ್ಲಿ ಕಾಣುತ್ತಿಲ್ಲ. ತಮ್ಮ ಹತ್ತಿರ ಒಂದು ನಿಮಿಷ ಸಮಯ ತೆಗೆದುಕೊಂಡು ಒಂದೆರಡು ಅಂಕಿ ಸಂಖ್ಯೆಗಳನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 1997 ರಲ್ಲಿ 29 ಸಾವಿರ ಬೀದಿ ನಾಯಿಗಳ ಸಂಖ್ಯೆ ಇತ್ತು. ಮತ್ತೆ 2000ನೇ ಇಸವಿಯಲ್ಲಿ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಆರಂಭ ಮಾಡಿದರು. ತಿಂಗಳಿಗೆ ಸರಾಸರಿ 7000 ಶಸ್ತ್ರಚಿಕಿತ್ಸೆಗಳನ್ನು ಮಾಡುತ್ತಿದ್ದೇವೆಂದು ಇವರು ಉತ್ತರ ಕೊಟ್ಟಿದ್ದಾರೆ ಈ ಪ್ರಕಾರ ವರ್ಷಕ್ಕೆ 80,000 ಆಗುತ್ತದೆ. ವರ್ಷಕ್ಕೆ 80,000 ಶಸ್ತ್ರ ಚಿಕಿತ್ಸೆ ಮಾಡಿದರೆ ವರ್ಷೇ ವರ್ಷ ನಾಯಿಗಳ ಸಂಖ್ಯೆ ಹೇಗೆ ಜಾಸ್ತಿಯಾಗುತ್ತಾ ಹೋಗುತ್ತಿದೆ ಎಂಬುದು ನನಗಂತೂ ಆಶ್ಚರ್ಯಕರವಾದ ವಿಷಯವಾಗಿದೆ. 2003ರಲ್ಲಿ ಬೀದಿ ನಾಯಿಗಳ ಸಂಖ್ಯೆ ಎಷ್ಟು ಇತ್ತೋ ಅದರ ಮೂರು ಪಟ್ಟು ಈಗ ಅದರ ಸಂಖ್ಯೆಯಾಗಿದೆ. ಕಳೆದ ವರ್ಷ 3.2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಸಂತಾನಹರಣ ಶಸ್ತ್ರಚಿಕಿತ್ಸೆಗೆ ಇಲ್ಲಿಯವರೆಗೆ ಒಟ್ಟು 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. Rabies vaccination ಬಿಟ್ಟು, ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಮಾಡುವುದಕ್ಕೆ 20 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಆದರೆ, ತಿಂಗಳು ತಿಂಗಳಿಗೆ ನೋಡುತ್ತಾ ಹೋದರೆ ನಾಯಿಗಳ ಸಂಖ್ಯೆ ಮಾತ್ರ ಜಾಸ್ತಿಯಾಗುತ್ತಾ ಹೋಗುತ್ತಿದೆ. ಒಂದು ವರ್ಷಕ್ಕೆ 80,000 ನಾಯಿಗಳಿಗೆ ಚಿಕಿತ್ಸೆ ಮಾಡಿದರೆ 2 ವರ್ಷದಲ್ಲಿ 1,60,000 ನಾಯಿಗಳಿಗೆ ಶಸ್ತ್ರಚಿಕಿತ್ಸೆ ಆಗುತ್ತದೆ. ಈ ರೀತಿಯಾಗಿ ಮಾಡಿದರೆ ಬೆಂಗಳೂರು ನಗರದಲ್ಲಿ ಬೀದಿ ನಾಯಿಗಳು ಹುಟ್ಟಲೇಬಾರದು. ವರ್ಷಕ್ಕೆ 80,000 ಶಸ್ತ್ರಚಿಕಿತ್ಸೆ ಮಾಡಿದವರೂ ಸಹ ವರ್ಷಕ್ಕೆ ಮತ್ತೆ 50,000 ಸಂಖ್ಯೆ ಜಾಸ್ತಿಯಾಗುತ್ತಾ ಹೋಗುತ್ತಿದೆ. ಇಲ್ಲಿ ಒಂದು ರೀತಿಯ ಮ್ಯಾಜಿಕ್ ನಡೆಯುತ್ತಿರಬಹುದು ಅಥವಾ ನಾಯಿಗಳಿಗೆ ಒಂದು ರೀತಿಯ ವಿಚಿತ್ರವಾದಂಥ ಶಕ್ತಿ ಇರಬೇಕು. ಇಲ್ಲದಿದ್ದರೆ ಬೋಗಸ್ ನಂಬರ್ ಅನ್ನು ಕೊಡುತ್ತಿದ್ದಾರೆಂದು

ತಿಳಿದುಕೊಳ್ಳಬೇಕಾಗುತ್ತದೆ. 2011ರಲ್ಲಿ ಬೆಂಗಳೂರು ನಗರದಲ್ಲಿ 24 ಸಾವಿರ ನಾಯಿ ಕಚ್ಚುವ ಪ್ರಕರಣಗಳು ವರದಿಯಾಗಿದೆ. ಕಳೆದ ವರ್ಷ ಇದಕ್ಕೋಸ್ಕರ 3.2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ. ಈ ರೀತಿಯಾಗಿ ಹಾರಿಕೆ ಉತ್ತರ ಕೊಟ್ಟು ಸದನದ ಸದಸ್ಯರಿಗೆ ಅಗೌರವ ಮಾಡುವುದಾದರೆ ನಾವು ಪ್ರಶ್ನೆ ಕೇಳವುದರಲ್ಲಿ ಅರ್ಥ ಇಲ್ಲ. ಬೆಂಗಳೂರು ನಗರದಲ್ಲಿ ಇವತ್ತಿನ ದಿವಸ ನಾಯಿ ಕಚ್ಚುವ ಪ್ರಕರಣಗಳು ಜಾಸ್ತಿಯಾಗಿದ್ದು. ಇದರಿಂದ ಬಹಳ ಜನರಿಗೆ ಹೆಚ್ಚು ತೊಂದರೆಯಾಗುತ್ತಿದೆ. ಮತ್ತೆ ಇದರಲ್ಲಿ ಹಣ ಸಹ ಪೋಲು ಆಗುತ್ತಿದೆ. ಎನ್.ಜಿ.ಓ.ಗಳಿಗೆ ಕೊಟ್ಟಿರುವ ಹಣ ನಿಜವಾಗಿಯೂ ಕೂಡ sterlization ಗೆ ಉಪಯೋಗವಾಗುತ್ತಿಲ್ಲ. ಬೆಂಗಳೂರು ನಗರದಲ್ಲಿ ಬೀದಿ ನಾಯಿಗಳ ಸಂಖ್ಯೆ ದಿನೇ ದಿನೇ ಬೆಳೆಯುತ್ತಾ ಹೋಗುತ್ತಿದೆ. ಹಾಗೆಯೇ ಕಚ್ಚುವ ಪ್ರಕರಣಗಳು ಸಹ ದಿನೇ ದಿನೇ ಜಾಸ್ತಿಯಾಗುತ್ತಿದೆ. ಶಾಸಕರಾಗಿ ನಾವುಗಳ್ಯಾರೂ ಈ ವಿಚಾರದಲ್ಲಿ ಜನರಿಗೆ ಉತ್ತರ ಕೊಡುವುದಕ್ಕೆ ಆಗುತ್ತಿಲ್ಲ. ಮಾನ್ಯ ನಗರಾಭಿವೃದ್ಧಿ ಸಚಿವರು ಸಹ ಇಲ್ಲಿಯೇ ಇದ್ದಾರೆ. ಇಲ್ಲಿನ ಸಮಸ್ಯೆ ಅವರಿಗೂ ಸಹ ಗೊತ್ತಿದೆ. ನಾಯಿ ಕಚ್ಚುವ ಪ್ರಕರಣದಲ್ಲಿ ನಾವು ಜನರಿಗೆ ಉತ್ತರ ಕೊಡುವುದಕ್ಕೆ ಆಗುತ್ತಿಲ್ಲ. ಇದರ ಬಗ್ಗೆ ಬಹಳ ಗಂಭೀರವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ಅಂಕಿ-ಸಂಖ್ಯೆಗಳಿವೆ. ಆದರೆ, ಒಂದೊಕ್ಕೊಂದು ತಾಳೆ ಆಗುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಬೀದಿ ನಾಯಿಗಳ ಬಗ್ಗೆ ಮಾನ್ಯ ಕೃಷ್ಣ ಭೈರೇಗೌಡರು ಪ್ರಶ್ನೆಯನ್ನು ಕೇಳಿದ್ದಾರೆ. ಇದರ ಬಗ್ಗೆ ನಾನು ಉತ್ತರವನ್ನು ಸಹ ಕೊಟ್ಟಿದ್ದೇನೆ. ಇದರ ಬಗ್ಗೆ ವಿಧಾನ ಪರಿಷತ್‌ನಲ್ಲಿ ಕೂಡ ಬಹಳಷ್ಟು ಚರ್ಚೆಯಾಗಿದೆ. ಅವರು ಈ ಸಂದರ್ಭದಲ್ಲಿ ಹೇಳುತ್ತಿರುವುದೇನೆಂದರೆ, ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿದ ಮೇಲೂ ಸಹ ನಾಯಿಗಳ ಸಂಖ್ಯೆ ಇಲ್ಲಿ ತಾಳೆ ಆಗುತ್ತಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಇಲ್ಲಿಯವರೆಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿರುವ ಅಂಕಿ-ಸಂಖ್ಯೆಗಳನ್ನು ಕೊಟ್ಟಿದ್ದೇವೆ. ಮತ್ತೆ ಸರಾಸರಿ ಪ್ರತಿ ತಿಂಗಳು ರೂ. 6500 ರಿಂದ ರೂ. 7000 ವರೆಗೆ ಮಾಡುತ್ತಿದ್ದೇನೆಂದು

ಹೇಳಲಾಗಿದೆ. ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡದೆ ಇರುವಂಥ ನಾಯಿಗಳಿಂದ ಆಗುವ birth rate ಅನ್ನು ಸಹ ನಾವು ನೋಡಬೇಕಾಗುತ್ತದೆ. 1,83,758 ಬೀದಿ ನಾಯಿಗಳು ಇದೆ ಎಂದು ಸರ್ವೆ ಪ್ರಕಾರ ಅಂದಾಜು ಮಾಡಲಾಗಿದೆ. ಸಂತಾನಹರಣ ಶಸ್ತ್ರಚಿಕಿತ್ಸೆ ಆದಮೇಲೆ ಇನ್ನೂ ಎಷ್ಟಿವೆ ಎಂದು ಹೊಸದಾಗಿ ಗಣತಿ ಮಾಡತಕ್ಕಂಥ ಕೆಲಸವನ್ನು ಈಗ ಮಾಡುತ್ತಿದ್ದೇವೆ. ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿದ ತಕ್ಷಣ ಅದರ ಜನನ ಪೂರ್ಣವಾಗಿ ನಿಯಂತ್ರಣ ಆಗುತ್ತದೆ ಎಂದಲ್ಲ. ಇನ್ನೂ ಯಾವುದಕ್ಕೆ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಲ್ಲವೋ ಅದಕ್ಕೆ ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಈಗ ಉತ್ತರ ಕೊಟ್ಟಿರುವುದರಲ್ಲಿ ಅದರ ಸಂಖ್ಯೆ ಸರಿಯಾಗಿದೆ. ಇದರ ಬಗ್ಗೆ ಜನರಲ್ಲಿ ಜಾಗ್ರತೆ ಮಾಡತಕ್ಕಂಥದು ಮತ್ತು ಇದನ್ನು ನಿಯಂತ್ರಣ ಮಾಡುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಅದನ್ನು ಸರ್ಕಾರ ಮಾಡುತ್ತಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ಇನ್ನೂ ಹೆಚ್ಚು ಉಪಕ್ರಮಗಳನ್ನು ಕೈಗೊಂಡು ಬೀದಿ ನಾಯಿಗಳ ಹಾವಳಿ ಮತ್ತು ಹುಚ್ಚು ನಾಯಿಗಳ ಹಾವಳಿ ತಡೆಯುವುದಕ್ಕೆ ಏನು ಪ್ರಯತ್ನ ಮಾಡಬೇಕಾಗಿದೆಯೋ ಆ ಎಲ್ಲ ಪ್ರಯತ್ನವನ್ನೂ ನಾವು ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಸಂತಾನಹರಣ ಶಸ್ತ್ರಚಿಕಿತ್ಸೆಗೆ 20 ಕೋಟಿ ರೂಪಾಯಿ ಖರ್ಚು ಮಾಡಿ ನಿಯಂತ್ರಣಕ್ಕೆ ಬಾರದೆ ಇದ್ದರೆ ಹೇಗೆ? ಅಂದರೆ ಅದಕ್ಕೆ ಕೊಡುವ ಔಷಧಿ ಕಳಪೆಯಿಂದ ಕೂಡಿದೆಯೇ ಅಥವಾ ಸಂತಾನಹರಣ ಶಸ್ತ್ರಚಿಕಿತ್ಸೆ ಸರಿಯಾಗಿಲ್ಲವೋ? ಇದರ ಬಗ್ಗೆ ಸರಿಯಾಗಿ ಹೇಳಬೇಕು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ವಿಧಾನ ಸೌಧದಲ್ಲಿರುವ ನಾಯಿಗಳನ್ನು ನಿಯಂತ್ರಣ ಮಾಡಿಲ್ಲ. ಒಂದು ಹೆಣ್ಣು ನಾಯಿ ಸುಮಾರು ಐದಾರು ಮರಿಗಳನ್ನು ಹಾಕುತ್ತದೆ. ಈ ಮರಿಗಳು ದೊಡ್ಡವಾಗಿ ಬೆಳೆಯುತ್ತಿರುವುದರಿಂದ ವಿಧಾನ ಸೌಧದಲ್ಲಿ ನಾವುಗಳೇ ನಾಯಿಗಳಾಗುವಂಥ ಪರಿಸ್ಥಿತಿ ಉಂಟಾಗಿದೆ ನಾಯಿಗಳ ಕಾಟದಿಂದ ಮಕ್ಕಳ ಬದುಕು ಚಿಂತಾಜನಕವಾಗಿದೆ. ಅದರ ಬಗ್ಗೆ ನಮ್ಮ ಮಾನ್ಯ

ಮುಖ್ಯಮಂತ್ರಿಗಳು ಆಸಕ್ತಿ ವಹಿಸುತ್ತಾರೆಂದು ನನಗೆ ನಂಬಿಕೆ ಇದೆ. ಮೊದಲು ವಿಧಾನ ಸೌಧದಲ್ಲಿರುವ ನಾಯಿಗಳನ್ನು ಹಿಡಿಯಿರಿ. ಅನಂತರ ಉಳಿದ ನಾಯಿಗಳನ್ನು ಹಿಡಿಯಿರಿ.

ಶ್ರೀ ನೆ.ಲ. ನರೇಂದ್ರ ಬಾಬು : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳವುದೇನೆಂದರೆ, ಕ್ಷೇತ್ರದ ವೀಕ್ಷಣೆಗೆ ಹೋದಾಗ ಸಾರ್ವಜನಿಕರಿಗೆ ನಾಯಿಗಳು ಕಚ್ಚುತ್ತಿರುವ ಬಗ್ಗೆ ಪ್ರತಿನಿತ್ಯ ನಾವುಗಳು ಉತ್ತರ ಹೇಳುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ಬೆಂಗಳೂರು ನಗರದಲ್ಲಿ ಅಥವಾ ಕ್ಷೇತ್ರವಾರು dog pond ಗಳನ್ನು ಮಾಡುವುದಕ್ಕೆ ದಯವಿಟ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿ ಅದರ ನಿಯಂತ್ರಣ ಮಾಡುತ್ತಿದ್ದೇವೆಂದು ಹೇಳಿದರೂ ಸಹ ಜನರು ಅದನ್ನು ಒಪ್ಪುತ್ತಿಲ್ಲ. ಒಂದೊಂದು ವಾರ್ಡ್‌ಗೆ ಸರಾಸರಿ 928 ನಾಯಿಗಳು ಬರುತ್ತವೆ. ಇಷ್ಟೊಂದು ಇದ್ದರೆ ಜನಗಳ ಸ್ಥಿತಿ ಏನಾಗಬಹದೆಂದು ತಾವು ಇಮೇಜ್ ಮಾಡಿಕೊಳ್ಳಿ. ವಿಧಾನ ಸೌಧದಲ್ಲಿ ಮತ್ತು ಏರ್‌ಪೋರ್ಟ್ ಹತ್ತಿರ ನಾಯಿಗಳಿರುವುದು ತಮಗೆ ಗೊತ್ತಿದೆ. ಇಲ್ಲಿರುವುದಕ್ಕೆ ಏನೂ ತೊಂದರೆ ಇಲ್ಲ. ಏಕೆಂದರೆ ಇವುಗಳನ್ನು ತಾವು ಹೇಗೋ ಕಂಟ್ರೋಲ್ ಮಾಡುತ್ತೀರಿ. ಆದರೆ, ಬೀದಿಯಲ್ಲಿರುವ ನಾಯಿಗಳನ್ನು ನಿಯಂತ್ರಣ ಮಾಡುವವರು ಯಾರು ? ಕಚ್ಚುವ ಗುಣವನ್ನು ತಪ್ಪಿಸುವುದಕ್ಕೆ ಸಾಧ್ಯವಿದೆಯೇ? ಆದ್ದರಿಂದ dog pond ಗಳನ್ನು ಮತ್ತು ಪ್ರಾಣಿದಯಾ ಸಂಘ ಮಾಡಿ ಜನರಿಗೆ ದಯವಿಟ್ಟು ರಕ್ಷಣೆ ಕೊಡಿ. ಇಲ್ಲದಿದ್ದರೆ ಕ್ಷೇತ್ರದಲ್ಲಿ ಜನರು ನಮ್ಮನ್ನು ಬಿಡುವುದಿಲ್ಲ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ತಮ್ಮ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳವುದೇನೆಂದರೆ, ನಗರದಲ್ಲಿ ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ನಾವುಗಳು ಕ್ಷೇತ್ರಗಳಿಗೆ ಹೋಗಿ ಇದರ ಬಗ್ಗೆ ಜನರಿಗೆ ಯಾವ ರೀತಿಯಾಗಿಯೂ ಸಹ ಉತ್ತರ ಕೊಡುವುದಕ್ಕೆ ಆಗುತ್ತಿಲ್ಲ. ನಾಯಿಗಳನ್ನು ಹತ್ಯೆ ಮಾಡವುದೊಂದೇ ಇದಕ್ಕೆ ಮಾರ್ಗ ಎಂದು

ಜನರು ಅಭಿಪ್ರಾಯಕ್ಕೆ ಬಂದಿದ್ದಾರೆ. ಆದರೆ, ಅದನ್ನು ನಾವು ಇಲ್ಲಿ ಒತ್ತಾಯ ಮಾಡುತ್ತಿಲ್ಲ. ಸಂತಾನಹರಣ ಶಸ್ತ್ರಚಿಕಿತ್ಸೆ ಮುಖಾಂತರ ಖಂಡಿತವಾಗಿಯೂ ಸಹ ನಾಯಿಗಳ ಸಂಖ್ಯೆಯನ್ನು ಹತೋಟಿಗೆ ತರಬಹುದು. ಆದರೆ, ಸಂತಾನಹರಣ ಶಸ್ತ್ರ ಚಿಕಿತ್ಸೆಯ ಕಾರ್ಯಕ್ರಮದ ಮುಖಾಂತರ ಹಣ ಪೋಲ್ ಆಗುತ್ತಿದೆಯೇ ಹೊರತು ಸಂತಾನಹರಣ ಶಸ್ತ್ರಚಿಕಿತ್ಸೆ ನಿಜವಾಗಿಯೂ ಅಲ್ಲಿ ಆಗುತ್ತಿಲ್ಲ. ಅಂಕಿ–ಸಂಖ್ಯೆಗಳನ್ನು ಕೊಟ್ಟು ಹಣವನ್ನು ತೆಗೆಯುತ್ತಿದ್ದಾರೆ. ಆರ್.ಟಿ.ಐ. ಮುಖಾಂತರ ನಾನು ಮಾಹಿತಿಗಳನ್ನು ಪಡದುಕೊಂಡಿದ್ದೇನೆ. ಇಲ್ಲಿಯವರೆಗೆ 3.30 ಲಕ್ಷ ನಾಯಿಗಳಿಗೆ ಚಿಕಿತ್ಸೆ ಮಾಡಿದ್ದೇವೆಂದು ಹೇಳಿರುವಂಥದರ ಬಗ್ಗೆ ಆರ್.ಟಿ.ಐ. ಯಿಂದ ಪಡದ ಮಾಹಿತಿ ನನ್ನ ಹತ್ತಿರ ಇದೆ. 3.30 ಲಕ್ಷ ನಾಯಿಗಳಿಗೆ ಶಸ್ತ್ರ ಚಿಕಿತ್ಸೆ ಮಾಡಿದ್ದರೆ ಬೆಂಗಳೂರಿನಲ್ಲಿ ನಾಯಿಗಳು ಉಳಿಯುವುದಕ್ಕೆ ಸಾಧ್ಯವಿದೆಯೇ? ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ. ಬೀದಿಗಳಲ್ಲಿ ನಾಯಿಗಳು ಮಕ್ಕಳಿಗೆ ಹೇಗೆಂದರೆ ಹಾಗೆ ಕಚ್ಚುತ್ತಿವೆ. ಮಕ್ಕಳ ತಂದೆ–ತಾಯಿ ನಮ್ಮ ಹತ್ತಿರ ಬಂದಾಗ ಅವರ ಗೋಳನ್ನು ನಾವು ಕೇಳುವುದಕ್ಕೆ ಆಗುತ್ತಿಲ್ಲ. ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇಡೀ ಬೆಂಗಳೂರು ನಗರ ಮತ್ತು ಬೇರೆ ನಗರಗಳಲ್ಲಿ ಈ ಒಂದು ಸಮಸ್ಯೆ ಇದೆ. ಆದ್ದರಿಂದ, ಇದರ ನಿಯಂತ್ರಣಕ್ಕೆ ಮಾಡುವ ಕೆಲಸವನ್ನು ಸರಿಯಾಗಿ ಮಾಡಿದರೆ ಖಂಡಿತವಾಗಿ. ಇದನ್ನು ನಿಗ್ರಹ ಮಾಡಬಹುದು. ಈ ಕಾರ್ಯಕ್ರಮದ ಹೆಸರಿನಲ್ಲಿ ಯಾವುದೇ ರೀತಿಯಲ್ಲಿ ಕಂಟ್ರೋಲ್ ಆಗುತ್ತಿಲ್ಲ. ಮಾನ್ಯ ಶಾಸಕರ ಹೇಳಿದ ಹಾಗೆ ಶಾಸಕರ ಭವನ ಮತ್ತು ವಿಧಾನ ಸೌಧದ ಹತ್ತಿರ ಇರುವ ನಾಯಿಗಳನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಇನ್ನು ಜನಸಾಮಾನ್ಯರ ನಾಯಿಗಳು ಎಲ್ಲಿಂದ ಕಂಟ್ರೋಲ್ ಮಾಡವುದಕ್ಕೆ ಆಗುತ್ತದೆ? ನಗರ ಪ್ರದೇಶಗಳಲ್ಲಿ ಇದೊಂದು ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾದಂಥ ಗಮನ ಕೊಟ್ಟು ಇದನ್ನು ಕಂಟ್ರೋಲ್ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಬಿಗಿ ಮಾಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತಿದ್ದೇನೆ. ಇದು ಬೆಂಗಳೂರು ಮಹಾನಗರದಲ್ಲಿ ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ಈ ಬಗ್ಗೆ ಪ್ರತಿನಿತ್ಯ ಪತ್ರಿಕೆಗಳಲ್ಲಿ ನೋಡುತ್ತಿದ್ದೇನೆ ಈ ಬಗ್ಗೆ ಸಾರ್ವಜನಿಕರು ಸಹ ಬಹಳಷ್ಟು ಸಲ complaints ಕೊಟ್ಟಿದ್ದಾರೆ. ಈ ಬಗ್ಗೆ ಹೈಕೋರ್ಟಿನಲ್ಲಿ ಒಂದು PIL ನಲ್ಲಿಯೂ ನ್ಯಾಯಾಧೀಶರು direction ಕೊಟ್ಟಿದ್ದಾರೆ. ಆ ದೃಷ್ಟಿಯಿಂದ ಇವತ್ತು ಕೆಲವೊಂದು ಸಂಘ-ಸಂಸ್ಥೆಗಳ ಮುಖಾಂತರ. NGO ಮುಖಾಂತರ ಈ ಒಂದು ಸಂತಾನಹರಣ ಚಿಕಿತ್ಸೆ ಮಾಡುವಂತಹದ್ದನ್ನು ನಾವು ಮಾಡುತ್ತಿದ್ದೇವೆ. ಈಗ ಮಾನ್ಯ ಸದಸ್ಯರಾದ ಶ್ರೀ ಕೃಷ್ಣ ಬೈರೇಗೌಡರು ಹೇಳಿದರು. ಅವರು ಕೊಟ್ಟಂತಹ ಸಂಖ್ಯೆ ಏನು ಇದೆ ಸಂತಾನಹರಣ ಮಾಡಿರುವುದನ್ನು ನೋಡಿದರೆ ಅವರು ಯಾವುದು ಇರಬಾರದು ಎಂದು ಹೇಳುತ್ತಿದ್ದಾರೆ. ಹೀಗಾಗಿ ಈ ಜವಾಬ್ದಾರಿಯನ್ನು ನಾವು NGO ರವರಿಗೆ ಕೊಟ್ಟಿದ್ದೇವೆ. ಅದರ ಬಗ್ಗೆಯೂ ಸಹ ನಾವು ವಿಚಾರಣೆ ಮಾಡುತ್ತೇವೆ. ಎಲ್ಲಿ ಎಷ್ಟು ಸಂತಾನಹರಣ ಚಿಕಿತ್ಸೆಯನ್ನು ಮಾಡಿದ್ದಾರೆ. ನಿಜವಾಗಿಯೂ ಅದು ಆಗಿದೆಯೋ ಇಲ್ಲವೋ ಎನ್ನುವುದು ಇದರ ಬಗ್ಗೆ ಕೂಲುಂಕಷವಾಗಿ ನಾವು ವಿಚಾರಣೆ ಮಾಡುತ್ತೇವೆ. ಇದರಲ್ಲಿ ಯಾರಾದರೂ ತಪ್ಪು ಮಾಡಿದ್ದರೆ definitely ಅವರ ಮೇಲೆ action ತೆಗೆದುಕೊಳ್ಳುತ್ತೇವೆ. ಮುಂದೆ ಬರುವಂತಹ ದಿವಸಗಳಲ್ಲಿ ಇನ್ನೂ ಕಟ್ಟುನಿಟ್ಟಾಗಿ ಈ ಒಂದು ಸಂತಾನ ನಿಯಂತ್ರಣ ಚಿಕಿತ್ಸೆಯನ್ನು ಮಾಡುವಂತಹದ್ದು ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇನೆ. ಇದರಿಂದ ಸಾರ್ವಜನಿಕರಿಗೆ ಏನು ತೊಂದರೆಯಾಗುತ್ತಿದೆ ಅದನ್ನು ನಿವಾರಣೆ ಮಾಡುವಂತಹ ನಿಟ್ಟಿನಲ್ಲಿ ಎಲ್ಲಾ ರೀತಿಯಾದ ಉಪಕ್ರಮಗಳನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು, ಶ್ರೀ ಹೆಚ್.ಪಿ. ಮಂಜುನಾಥ್ ರವರ ಪ್ರಶ್ನೆ 24 (452) ಈ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಟೈಮ್ ಕೇಳಿದ್ದಾರೆ.